ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 272 |
| ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 11/07/2018 |
| ಉತ್ತರಿಸುವ ಸಚಿವರು | ಮಾನ್ಯ ಬೃಹತ್ ಕೈಗಾರಿಕೆಗಳು, ಸಕ್ಕರೆ ಮತ್ತು ಐಟಿ ಬಿಟಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ರೈತರ ಕಬ್ಬಿಗೆ ವೈಜ್ಞಾನಿಕವಾಗಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಆರ್.ಪಿ. ಬೆಲೆ ನಿಗದಿ ಮಾಡಲು ಸರ್ಕಾರ ವಿಫಲವಾಗಿರುವ ಮತ್ತು ಸದರಿ ದರದಲ್ಲಿ ರೈತರ ಕಬ್ಬಿಗೆ ಕಾರ್ಖಾನೆಗಳು ಬಾಕಿ ಪಾವತಿಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೇಂದ್ರ ಸರ್ಕಾರವು 2017-18ನೇ ಸಕ್ಕರೆ ಹಂಗಾಮಿಗೆ ಶೇ.9.5 ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್‌ಟನ್ ಕಬ್ಬಿಗೆ ರೂ.2550/-ನ್ನು ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ಯನ್ನಾಗಿ ಹಾಗೂ ನಂತರದ ಶೇ.1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್‌ಟನ್‌ಗೆ ರೂ.268/-ನ್ನು ಹೆಚ್ಚುವರಿ ಬೆಲೆಯನ್ನಾಗಿ ಪತ್ರ ಸಂಖ್ಯೆ 3(3)/2016-SP-II ದಿನಾಂಕ 01.06.2017 ರಲ್ಲಿ ನಿಗದಿಪಡಿಸಿದೆ.<br><br>ಅದರಂತೆ ರಾಜ್ಯದಲ್ಲಿ 2016-17ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲ್ಪಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು 2017-18ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1)ರ ಪ್ರಕಾರ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಆದೇಶ ಸಂಖ್ಯೆ :ಡಿಎಸ್‌ಕೆ/ಎಸ್‌ಕೆ/18/2017 ದಿನಾಂಕ 16.10.2017ರಲ್ಲಿ ಪ್ರಕಟಿಸಲಾಗಿದೆ.<br><br>2017-18ನೇ ಸಾಲಿನಲ್ಲಿ ರಾಜ್ಯದಲ್ಲಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸಿ 356.05 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿರುತ್ತವೆ. ನುರಿಸಿರುವ ಕಬ್ಬಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆಯಂತೆ ಒಟ್ಟು ರೂ.9851.83 ಕೋಟಿಗಳನ್ನು ಪಾವತಿಸಬೇಕಿದ್ದು ದಿನಾಂಕ 30.04.2018ರ ಅಂತ್ಯಕ್ಕೆ ರೂ.7716.04 ಕೋಟಿಗಳನ್ನು ಪಾವತಿಸಿ ರೂ.2135.79 ಕೋಟಿಗಳು ಬಾಕಿ ಉಳಿಸಿಕೊಂಡಿದ್ದವು. ಈ ದಿನಾಂಕಕ್ಕೆ 14 ಸಕ್ಕರೆ ಕಾರ್ಖಾನೆಗಳು ನ್ಯಾಯ ಮತ್ತು ಲಾಭದಾಯಕ ಬೆಲೆಯಂತೆ ಪೂರ್ಣಕಬ್ಬು ಬಿಲ್ಲು ಪಾವತಿಸಿದ್ದು. ಬಾಕಿ ಉಳಿದ 51 ಸಕ್ಕರೆ ಕಾರ್ಖಾನೆಗಳಿಗೆ ಈ ಬಾಕಿ ಮೊಬಲಗನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಅವಕಾಶಗಳ ರೀತ್ಯಾ |
| ಆ) | ಹಾಗಿದ್ದಲ್ಲಿ, ಸದರಿ ದರದಂತೆ ರೈತರ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಲು ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ: ಕಬ್ಬು ಅರೆಯುವ ಕಾರ್ಖಾನೆಗಳಿಂದ ರೈತರಿಗೆ ಕಬ್ಬಿನ ಬಾಕಿ ಬಿಲ್ ಪಾವತಿಸಲು ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ: (ವಿವರ ನೀಡುವುದು) | |

ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲು ಕಬ್ಬು (ನಿಯಂತ್ರಣ) ಆದೇಶ 1956 ರ 3(8)ರ ರೀತ್ಯಾ ಏಕೆ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಬಾರದು ಎಂಬುದಕ್ಕೆ ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗಿತ್ತು. ಅಲ್ಲದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಬ್ಬು ಬಾಕಿ ಸಂಬಂಧ ದಿನಾಂಕ 02.06.2018 ರಂದು ನಡೆಸಿದ ಪರಿಶೀಲನಾ ಸಭೆ ಹಾಗೂ ನೀಡಿದ ಸೂಚನೆಗಳನ್ನು ಜಿಲ್ಲಾಧಿಕಾರಿಗಳು ಕಾರ್ಖಾನೆಗಳ ಸಭೆ ನಡೆಸಿ. ಕಬ್ಬು ಬಾಕಿಯನ್ನು ತೀರುವಳಿ ಮಾಡಿಸಲು ಕೈಗೊಂಡ ಕ್ರಮಗಳಿಗೆ ಸ್ಪಂದಿಸಿದ ಕಾರ್ಖಾನೆಗಳು ಬಾಕಿ ಮೊಬಲಗಿನಲ್ಲಿ ರೂ.1090.74 ಕೋಟಿಗಳನ್ನು ಪಾವತಿಸುವುದರ ಮೂಲಕ ದಿನಾಂಕ 30.06.2018 ಕ್ಕೆ ಇದ್ದಂತೆ ಒಟ್ಟು ರೂ.9086.92 ಕೋಟಿಗಳನ್ನು ಪಾವತಿಸಿರುತ್ತಾರೆ. ಬಾಕಿ ರೂ.1045.05 ಕೋಟಿಗಳು ಇರುತ್ತದೆ. ಪಾವತಿಯಾಗಿರುವ ಹಣದಲ್ಲಿ ಕೆಲವು ಕಾರ್ಖಾನೆಗಳು ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.) ಗಿಂತಲೂ ಹೆಚ್ಚಿನ ಹಣ ಪಾವತಿಸಿರುವುದು ಕಂಡು ಬರುತ್ತದೆ.

ಈ ಮಧ್ಯೆ ಕೇಂದ್ರ ಸರ್ಕಾರವು ಅಧಿಸೂಚನೆ ಸಂಖ್ಯೆ 1(5)/2018-ಎಸ್.ಪಿ-I ದಿನಾಂಕ 09.05.2018 ರಲ್ಲಿ ಕಾರ್ಖಾನೆಗಳು 2017-18ನೇ ಸಕ್ಕರೆ ಹಂಗಾಮಿನಲ್ಲಿ ನುರಿಸಿರುವ ಕಬ್ಬಿನ ಬಾಕಿ ಮೊಬಲಗನ್ನು ಪಾವತಿಸಲು ಅನುಕೂಲವಾಗುವಂತೆ ಪ್ರತಿ ಮೆ.ಟನ್ ಕಬ್ಬಿಗೆ ರೂ.55/- ರಂತೆ ಆರ್ಥಿಕ ಸಹಾಯಧನ ಮತ್ತು ದೇಶದಲ್ಲಿ 30 ಲಕ್ಷ ಮೆ.ಟನ್ ಸಕ್ಕರೆಯನ್ನು ಕಾಮು ದಾಸ್ತಾನು (Buffer Stock) ನಿರ್ವಹಿಸುವ ಯೋಜನೆಯನ್ನು ಅಧಿಸೂಚನೆ ಸಂಖ್ಯೆ 1(6)/2018-ಎಸ್.ಪಿ-I ದಿನಾಂಕ 29.06.2018 ರಲ್ಲಿ ಘೋಷಿಸಿದ್ದು. ಇವೆರಡೂ ಯೋಜನೆಗಳ ಉಪಯೋಗವನ್ನು ಪಡೆದುಕೊಂಡು ರೈತರ ಕಬ್ಬು ಬಾಕಿಯನ್ನು ತೀರುವಳಿ ಮಾಡಿಸಲು ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ 29.06.2018 ರಂದು ನಡೆದ ವಿಡಿಯೋ ಕಾನ್ಫರೆಸ್ ಕಾರ್ಯಕ್ರಮದಲ್ಲಿ ಸೂಚಿಸಲಾಗಿದೆ. ಅದಾಗ್ಯೂ ವಸೂಲಾಗದಿದ್ದಲ್ಲಿ. ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ವಸೂಲಾತಿ ಕ್ರಮ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ರಾಜ್ಯದಲ್ಲಿ2015-16. 2016-17 ಹಾಗೂ 2017-18ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್ಆರ್‌ಪಿ ದರದಲ್ಲಿ ಪಾವತಿಸಲು ಬಾಕಿ ಉಳಿಸಿಕೊಂಡಿರುವ ಒಟ್ಟು ಮೊತ್ತವೆಷ್ಟು: ಯಾವ್ಯಾವ ಕಾರ್ಖಾನೆಗಳು ಎಷ್ಟೆಷ್ಟು ಬಾಕಿ ಉಳಿಸಿಕೊಂಡಿವೆ: (ಸಂಪೂರ್ಣ ವಿವರ ಒದಗಿಸುವುದು)

2015-16. 2016-17 ಹಾಗೂ 2017-18ನೇ ಸಾಲಿನಲ್ಲಿ ಕಬ್ಬು ನುರಿಸುವ ಕಾರ್ಯ ನಿರ್ವಹಿಸಿರುವ ಕಾರ್ಖಾನೆಗಳು ಕೇಂದ್ರ ಸರ್ಕಾರ ನಿಗದಿಪಡಿಸಿರುವ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ.)ಯಂತೆ ಪಾವತಿಸಬೇಕಾದ. ಪಾವತಿಸಿರುವ ಮತ್ತು ಪಾವತಿಸಲು ಬಾಕಿ ಇರುವ ಮೊತ್ತದ ವಿವರ ಈ ಕೆಳಗಿನಂತಿದೆ.

(ರೂ. ಕೋಟಿಗಳಲ್ಲಿ)

| ವರ್ಷ | ಕಾರ್ಖಾನೆಗಳ ಸಂಖ್ಯೆ | ನುರಿಸಿರುವ ಕಬ್ಬು(ಲಕ್ಷ ಮೆ. ಟನ್‌ಗಳಲ್ಲಿ) | ಪಾವತಿಸಬೇಕಾದ ಮೊತ್ತ | ಪಾವತಿಸಿರುವ ಮೊತ್ತ | ಬಾಕಿ ಮೊತ್ತ |
|---|---|---|---|---|---|
| 2015-16 | 64 | 376.65 | 10143.14 | 10122.30 | 20.84 |
| 2016-17 | 63 | 201.81 | 5343.07 | 6702.84 | 0 |
| 2017-18 | 65 | 356.05 | 9851.83 | 9086.92 | 1045.05 |

2015-16ನೇ ಸಾಲಿನಲ್ಲಿ ಐ.ಎಸ್.ಆರ್. ಶುಗರ್ಸ್ ಲಿ.. ಚಿತ್ತವಾಡಗಿ. ಬಳ್ಳಾರಿ ಜಿಲ್ಲೆಕಾರ್ಖಾನೆಯು ರೂ.9.47 ಕೋಟಿ ಮತ್ತು ಮೆ॥ ಶಿವಸಾಗರ್ ಶುಗರ್ಸ್ ಲಿ.. ಉದುಪುಡಿ. ಬೆಳಗಾವಿ ಜಿಲ್ಲೆ ಕಾರ್ಖಾನೆಯು ರೂ.11.37 ಕೋಟಿ ಸೇರಿ ಒಟ್ಟು 20.84 ಕೋಟಿ ಬಾಕಿ ಉಳಿಸಿಕೊಂಡಿದ್ದು. ಬಾಕಿ ವಸೂಲಾತಿಗಾಗಿ ವಸೂಲಾತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು. ಬಳ್ಳಾರಿ ಹಾಗೂ ಬೆಳಗಾವಿ ಇವರಿಗೆ ಹೊರಡಿಸಲಾಗಿದೆ. ಈ ಪೈಕಿ ಐ.ಎಸ್.ಆರ್. ಶುಗರ್ಸ್ ಲಿ. ಕಾರ್ಖಾನೆಯು ಕರ್ನಾಟಕ ಉಚ್ಚ ನ್ಯಾಯಾಲಯ. ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ 52611/2016 ದಾಖಲಿಸಿ. ವಸೂಲಾತಿಕ್ರಮ ಕೈಗೊಳ್ಳದಂತೆ ತಡೆಯಾಜ್ಞೆ ಪಡೆದುಕೊಂಡಿದೆ. ತಡೆಯಾಜ್ಞೆ ತೆರವುಗೊಳಿಸಲು ಸರ್ಕಾರವು ಮಾಡಿದ ಪ್ರಯತ್ನದ ಫಲವಾಗಿ ಕಾರ್ಖಾನೆಯು ರೂ.4.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು. ಬಳ್ಳಾರಿ ಇವರ ಲೆಕ್ಕದಲ್ಲಿ ಜಮಾ ಮಾಡಿದ್ದು. ಸದರಿ ಮೊತ್ತವನ್ನು ರೈತರಿಗೆ ಹಂಚಿಕೆ ಮಾಡಲಾಗುತ್ತಿದೆ. ಉಳಿದ ಮೊತ್ತವನ್ನು ಒಂದು ತಿಂಗಳೊಳಗಾಗಿ ಪಾವತಿಸುವುದಾಗಿ ಕಾರ್ಖಾನೆಯು ನ್ಯಾಯಾಲಯಕ್ಕೆ ದೃಢೀಕರಣವನ್ನು ಸಲ್ಲಿಸಿರುತ್ತದೆ.

ಮತ್ತೊಂದು ಕಾರ್ಖಾನೆಯಾದ ಮೆ॥ ಶಿವಸಾಗರ್ ಶುಗರ್ಸ್ ಲಿ. ಬೆಳಗಾವಿ ಜಿಲ್ಲೆ ಕಾರ್ಖಾನೆಯು ಕಳೆದೆರಡು ಹಂಗಾಮುಗಳಿಂದ ನಿಷ್ಕ್ರಿಯವಾಗಿದ್ದು.ಸಕ್ಕರೆ ಉತ್ಪಾದನೆ ಇಲ್ಲದಿರುವುದರಿಂದ ಕಾರ್ಖಾನೆಯ ಇತರೆ ಚರ ಮತ್ತು ಸ್ಥಿರಾಸ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು. ಬೆಳಗಾವಿ ಇವರಿಗೆ ತಿಳಿಸಲಾಗಿದೆ.

| | | |
|---|---|---|
| | | 2016-17ನೇ ಹಂಗಾಮಿಗೆ ಸಂಬಂಧಿಸಿದಂತೆ ಕಾರ್ಖಾನೆಗಳು ಪೂರ್ಣವಾಗಿ ತೀರುವಳಿ ಮಾಡಿರುತ್ತವೆ. ಕೆಲವು ಕಾರ್ಖಾನೆಗಳು ನ್ಯಾಯ ಮತ್ತು ಲಾಭದಾಯಕ (ಎಫ್.ಆರ್.ಪಿ.) ಬೆಲೆಗೆ ಮೇಲ್ಪಟ್ಟು ಪ್ರತಿಟನ್ನಿಗೆ ರೂ.200/- ರಿಂದ ರೂ.700/- ರವರೆಗೂ ಪಾವತಿಸಿವೆ.<br><br>2017-18ನೇ ಸಾಲಿನ ಕಾರ್ಖಾನೆವಾರು ಬಾಕಿ ವಿವರಗಳನ್ನು **ಅನುಬಂಧ-1**ರಲ್ಲಿ ಸಲ್ಲಿಸಿದೆ. |
| ಈ) | ಯಾವ ಕಾಲಮಿತಿಯಲ್ಲಿ ರೈತರ ಕಬ್ಬಿನ ಬಾಕಿ ಹಣವನ್ನು ಪೂರ್ಣವಾಗಿ ಪಾವತಿಸಲಾಗುವುದು? | ರೈತರಕಬ್ಬು ಬಾಕಿಯನ್ನು ತೀರುವಳಿ ಮಾಡಿಸಲು ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ದಿನಾಂಕ 29.06.2018 ರಂದು ಸರ್ಕಾರದ ಕಾರ್ಯದರ್ಶಿಗಳು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ನಡೆಸಿದ ವಿಡಿಯೋಕಾನ್ಫರೆಸ್ ಕಾರ್ಯಕ್ರಮದಲ್ಲಿ 2017-18ನೇ ಸಾಲಿನ ಕಬ್ಬು ಬಿಲ್ಲು ಬಾಕಿ ಸಂಬಂಧ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತೊಮ್ಮೆ ಕಾರ್ಖಾನೆಗಳ ಸಭೆ ಏರ್ಪಡಿಸಿ ಚರ್ಚಿಸಿ ಬಾಕಿ ಪಾವತಿಯಾಗುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ. ಅದಾಗ್ಯೂ ವಸೂಲಾಗದಿದ್ದಲ್ಲಿ. ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ವಸೂಲಾತಿಕ್ರಮ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಅಲ್ಲದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಕ್ಕರೆ ಹಾಗೂ ಮಾಹಿತಿ ತಂತ್ರಜ್ಞಾನ. ಜೈವಿಕ ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಮಾನ್ಯ ಸಹಕಾರ ಸಚಿವರ ಸಮ್ಮುಖದಲ್ಲಿ ದಿನಾಂಕ 06.07.2018 ರಂದು ಸಭೆ ನಡೆಸಿ. ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಂಡು ವಸೂಲು ಮಾಡಲು ತೀರ್ಮಾನಿಸಲಾಗಿದ್ದು. ಅದರಂತೆ ಕ್ರಮ ಕೈಗೊಳ್ಳಲಾಗಿದೆ. |

**ಸಂಖೆ: ಸಿಐ 43 ಎಸ್‌ಜಿಎಫ್ 2018**

(ಕೆ.ಜೆ. ಜಾರ್ಜ್)

ಮಾನ್ಯ ಬೃಹತ್ ಕೈಗಾರಿಕೆಗಳು,
ಸಕ್ಕರೆ ಮತ್ತು ಐಟಿ ಬಿಟಿ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 272ಕ್ಕೆ ಅನುಬಂಧ-1

## STATEMENT SHOWING THE CANE CRUSHED AND CANE PAYMENT POSITION FOR THE SUGAR SEASON 2017-18

( AS on 30-06-2018)

| Sl. No | Name of the factory | Total cane crushed (in MTs) | FRP (rate per mt ) | Amount Payable 1st instalment FRP Rs.in lakhs (4X7) | Amount paid (Rs.in lakhs) | Balance (Rs. in lakhs) (8-9) |
|---|---|---|---|---|---|---|
| 1 | 2 | 4 | 7 | 8 | 9 | 10 |
| 1 | SSK ALAND, ALAND TQ. KALABURGI DISTRICT (Leased to NSL Sugars) | 406500 | 2550 | 10366 | 0 | 10366 |
| 2 | SRI BHIMASHANKAR SAHAKARI SAKKARE KARKHANE NIYAMIT , MARGUR, INDI TQ, VIJAYAPUR DIST. | 220598 | 2550 | 5625 | 870 | 4755 |
| 3 | JAMAKHANDI SUGARS LTD., UNIT-2, NAD KD, INDI TQ, VIJAYAPURA DISTRICT | 531718 | 2550 | 13559 | 5437 | 8122 |
| 4 | DYANAYOGI SUGARS LTD., INDI TQ. VIJAYAPURA DISTRICT | 214589 | 2550 | 5472 | 2580 | 2892 |
| 5 | JAMAKHANDI SUGARS LTD., HIREPADASALAGI, JAMKHANDI TQ. BAGALKOTE DIST. | 686438 | 2743 | 18829 | 9147 | 9682 |
| 6 | MALAPRABHA SSK LTD., M.K. Hubli, BAILAHONGALA TQ. BELGAUM DIST. | 229515 | 2856 | 6555 | 4005 | 2550 |
| 7 | SOVEREIGN INSTRIES LTD, TERDAL VILLAGE, JAMKHANDI TALUK, BAGALKOT DIST. | 88942 | 2550 | 2268 | 1457 | 811 |
| 8 | INDIAN CANE POWER LTD MUDHOL TQ. BAGALKOTE DIST. | 727616 | 2671 | 19435 | 14421 | 5014 |
| 9 | GEM SUGARS LTD., BILAGI TQ. BAGALKOTE DIST. | 757627 | 2888 | 21880 | 16642 | 5238 |
| 10 | BHALKESHWAR SUGARS LTD, BAJOLAGA, BHALKI TQ., BIDAR DIST. | 412152 | 2550 | 10510 | 8004 | 2506 |
| 11 | MANALI SUGARS LTD., MALAGHAN, SINDAGI TQ, VIJAYAPURA DISTRICT | 266142 | 2550 | 6787 | 5155 | 1632 |
| 12 | THE BIDAR KISSAN SHAKKAR KARKHANA LTD., MOGDAL VILLAGE, NATIONAL HIGHWAY NO.9, BIDAR TQ & DIST | 246906 | 2550 | 6296 | 4845 | 1451 |
| 13 | SHREE BASAVESHWARA SUGARS LTD., KARJOL VIJAYAPURA DISTRICT. | 291167 | 2609 | 7597 | 5993 | 1604 |
| 14 | NARANJA SSK LTD., BIDAR TQ & DIST. | 420090 | 2550 | 10712 | 8649 | 2063 |
| 15 | COREGREEN SUGAR & FUELS PVT. LTD. SHAHAPURA, TQ. YADAGIRI DIST. | 582878 | 2636 | 15365 | 12646 | 2719 |
| 16 | UGAR SUGARS LTD., JEWARGI TQ. KALABURGI DISTRICT | 345443 | 2550 | 8809 | 7334 | 1475 |
| 17 | RENUKA SUGARS LTD., MANOLI, SAVAD ATTI TQ. BELGAUM DIST. | 881560 | 3180 | 28034 | 23449 | 4585 |
| 18 | CHAMUNDESWARI SUGARS LTD., MADDUR TQ. MANDYA DIST. | 388726 | 2550 | 9913 | 8288 | 1625 |

| | | | | | | |
|---|---|---|---|---|---|---|
| 19 | GODAVARI SUGARS LTD., MUDHOL TQ. BAGALKOTE DIST. | 1817687 | 2746 | 49914 | 42437 | 7477 |
| 20 | SATISH SUGARS TD. GOKAK TQ. BELGAUM DIST. | 1135017 | 2925 | 33199 | 28056 | 5143 |
| 21 | PRABULINGESWARA SUGARS LTD., JAMKHANDI TQ. BAGALKOTE DIST. | 1081212 | 2703 | 29225 | 24809 | 4416 |
| 22 | BILAGI SUGAR MILL LTD., BILAGI TQ. BAGALKOTE DIST. | 623483 | 2847 | 17751 | 15151 | 2600 |
| 23 | RAITHARA SSK LTD., MUDHOL TQ. BAGALKOTE DIST. | 376091 | 2786 | 10478 | 8913 | 1565 |
| 24 | INDIAN SUGAR MANUFACTURING CO. LTD. INDI TQ. VIJAYAPURA DISTRICT | 528319 | 2692 | 14222 | 12287 | 1935 |
| 25 | RENUKA SUGAR S LTD., HAVALAGA, AFZALPURA TQ. KALABURGI DISTRICT | 771660 | 2550 | 19677 | 17081 | 2596 |
| 26 | KPR SUGAR MILLS PVT LTD., SINDAGI TALUK,VIJAYAPURA DISTRICT | 833791 | 2550 | 21262 | 19496 | 1766 |
| 27 | HALASIDANATHA SSK LTD., NIPPANI TQ. BELGAUM DIST. | 404779 | 2995 | 12123 | 11148 | 975 |
| 28 | BHAVANI SUGARS LTD., BIDAR TQ. BIDAR DIST. | 77734 | 2550 | 1982 | 1826 | 156 |
| 29 | NIRANI SUGARS LTD., MUDHOL TQ. BAGALKOTE DIST. | 1197037 | 2663 | 31877 | 29557 | 2320 |
| 30 | NSL (TUNGABHADRA) SUGARS LTD., SIRAGUPPA TQ BELLARY DIST | 164948 | 2711 | 4472 | 4165 | 307 |
| 31 | SHRI SAI PRIYA SUGARS LTD., HIPPARAGI-MYGUR TALUK. JAMKHANDI DIST, BAGALKOT. | 673940 | 2673 | 18014 | 17289 | 725 |
| 32 | NSL SUGARS (SCM SUGARS) LTD., MADDUR TQ. MANDYA DIST. | 527192 | 2550 | 13443 | 12852 | 591 |
| 33 | BELGAUM SUGARS PVT LTD., HUDALI VILLAGE, BELAGAVI TALUK & DISTRICT | 378691 | 3003 | 11372 | 10909 | 463 |
| 34 | GHATAPRABHA SSK LTD., GOKAK TQ. BELGAUM DIST. | 314694 | 2735 | 8607 | 8249 | 358 |
| 35 | MYSORE SUGARS LTD, MANDYA, MANDYA DIST | 100062 | 2550 | 2552 | 2458 | 94 |
| 36 | ATHANI FARMERS LTD., AHTANI TQ. BELGAUM DIST. | 978934 | 2711 | 26539 | 25942 | 597 |
| 37 | NANDI SSK LTD., VIJAYAPURA DISTRICT | 843050 | 3035 | 25587 | 25038 | 549 |
| 38 | VENKATESWARA POWER PROJECT LTD., CHIKKODI TQ. BELGAUM DIST. | 916637 | 3335 | 30570 | 30030 | 540 |
| 39 | SHREE BALAJI SUGARS & CHEMICAL PVT. LTD., YARAGAL, VIJAYAPURA DISTRICT. | 438645 | 2722 | 11940 | 11749 | 191 |
| 40 | SHIRAGUPPI SUGAR WORKS LTD., KHANAPUR ROAD, BELGAUM DIST | 441765 | 3260 | 14402 | 14348 | 54 |
| | Total | | | | | 104505 |

COMMISSIONER FOR CANE DEVELOPMENT
AND DIRECTOR OF SUGAR